ಓ.ಎಸ್. ನಂ. 235/2014
PW-3

**<u>ಸಾಕ್ಷಿಯನ್ನು ದಿನಾಂಕ: 04-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎ ಎಂ ಕೆ ವಕೀಲರಿಂದ</u>**

1. ವಾದಿಯು ಈ ದಾವೆಯನ್ನು ಸ.ನ. 60/1 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನಮಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ, ದಾವಾ ಆಸ್ತಿಯಲ್ಲಿ ನನ್ನ ಮಾವ ಕೋರಿಗಾಗಿ 20 ವರ್ಷಗಳ ಹಿಂದೆ ವ್ಯವಸಾಯ ಮಾಡುತ್ತಿದ್ದರು. ಆ ಪೈಕಿ ನನ್ನ ಮಾವ ಸುಮಾರು 20-30 ವರ್ಷಗಳ ಕಾಲ ವ್ಯವಸಾಯವನ್ನು ಮಾಡುತ್ತಿದ್ದು ಆ ಸಮಯದಲ್ಲಿ ನಾನು ದಾವಾ ಆಸ್ತಿ ಬಳಿ ಹೋಗುತ್ತಿದ್ದೆ. ದಾವಾ ಆಸ್ತಿ ನಮ್ಮ ಗ್ರಾಮಕ್ಕೆ 15 ಕಿ ಮೀ ದೂರವಾಗುತ್ತದೆ. ನನ್ನ ಮಾವ ಕೋರಿಕೆಗಾಗಿ ವ್ಯವಸಾಯ ಮಾಡುತ್ತಿರುವುದನ್ನು ಬಿಟ್ಟ ನಂತರ ವಾದಿಯು ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದು ಅದನ್ನು ನಾನು ನೋಡಿರುತ್ತೇನೆ. ನಾನು ಟಿ ಗೊಲ್ಲಹಳ್ಳಿಯಲ್ಲಿ ಮದುವೆ ಆಗಿರುವ ಕಾರಣ ದಾವಾ ಆಸ್ತಿ ಬಳಿ ನಾನು ಸದರಿ ಗ್ರಾಮಕ್ಕೆ ಹೋಗುತ್ತಿದ್ದೆ. ಸ. ನ. 60 ಪೋಡಾಗಿರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ವಾದಿ ಮತ್ತು ಅವರ ಸಹೋದರರು ವಿಭಾಗವನ್ನು ಸುಮಾರು ವರ್ಷಳ ಹಿಂದೆ ಮಾಡಿಕೊಂಡಿದ್ದು, ಆ ರೀತಿ ವಿಭಾಗ ಮಾಡಿಕೊಂಡ ದಿನಾಂಕ, ತಿಂಗಳು ನನ್ನಿಂದ ಹೇಳಲಾಗುವುದಿಲ್ಲ.

2. ದಾವಾ ಆಸ್ತಿಗೆ ಸಂಬಂಧಿಸಿದಂತೆ ಏನು ವ್ಯವಹಾರಗಳು ಆಗಿರುತ್ತವೆ ಎಂಬುದರ ಬಗ್ಗೆ ನನಗೆ ಗೊತ್ತು. ವಾದಿ ಮತ್ತು ಅವರ ಸಹೋದರರು ನ್ಯಾಯಾಲಯದಲ್ಲಿ ಡಿಕ್ರಿ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತು. ಆ ಬಗ್ಗೆ ನಾನು ಡಿಕ್ರಿ ಕಾಪಿಯನ್ನು ನೋಡಿರುವುದಿಲ್ಲ. ಸದರಿ ಡಿಕ್ರಿ ಪ್ರಕಾರ 4 ಜನ ಅಣ್ಣತಮ್ಮಂದಿರಿಗೂ ಸಮವಾಗಿ ಭಾಗ ಆಗಿರುತ್ತದೆ. ದಾವಾ ಆಸ್ತಿಯನ್ನು ಅಳತೆ ಮಾಡಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ಸ್ಕೆಚನ್ನು ನೋಡಿರುವುದಿಲ್ಲ. ಮಂಜುಳ ಮತ್ತು ವಾದಿಗೆ ಏನು ಸಂಬಂಧ ಎಂದು ನನಗೆ ಗೊತ್ತಿಲ್ಲ. ಮಂಜುಳ ಮತ್ತು ಪ್ರತಿವಾದಿ ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿಗೆ 1 ಎಕರೆ ಜಮೀನು ಇರುತ್ತದೆ ಎಂದರೆ, ಜಮೀನು ಇರುವ ಬಗ್ಗೆ ಗೊತ್ತು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ಗೊತ್ತಿಲ್ಲ.

3. ಮಂಜುಳರವರಿಗೆ ಸೇರಿದ ಆಸ್ತಿಯನ್ನು ನಾನು ನೋಡಿರುತ್ತೇನೆ. ಮಂಜುಳಾರವರಿಗೆ ಸೇರಿದ ಆಸ್ತಿಯ ಉತ್ತರಕ್ಕೆ ವಾದಿಗೆ ಸೇರಿದ ಜಮೀನು ಬರುತ್ತದೆ ಎಂದರೆ ಸರಿಯಲ್ಲ, ದಕ್ಷಿಣ ದಿಕ್ಕಿಗೆ ಬರುತ್ತದೆ. ದಾವಾ ಆಸ್ತಿಯ ದಕ್ಷಿಣಕ್ಕೆ ಕಾಲುವೆ ಬರುತ್ತದೆ. ಸದರಿ ಕಾಲುವೆ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ನೆನಪಿಲ್ಲ. ಸದರಿ ಕಾಲುವೆ ಮಂಜುಳಾರವರ ಜಮೀನಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ,

ವಾದಿ ಮತ್ತು ಪ್ರತಿವಾದಿಯ ಜಮೀನಿನ ಮಧ್ಯದಲ್ಲಿ ಬರುತ್ತದೆ. ಸದರಿ ಕಾಲುವೆಯಿಂದ ಉತ್ತರಕ್ಕೆ ಮಂಜುಳಾರವರಿಗೆ ಸೇರಿದ ಜಮೀನು ಬರುತ್ತದೆ ಎಂದರೆ ಸರಿಯಲ್ಲ, ಕಾಲುವೆಯ ಉತ್ತರಕ್ಕೆ ಚಂದ್ರಶೇಖರ್ ರವರ ಜಮೀನು ಬರುತ್ತದೆ ಅದರ ನಂತರ ಮಂಜುಳಾರವರ ಜಮೀನು ಬರುತ್ತದೆ. ವಾದಿಯು ಎಷ್ಟು ವಿಸ್ತೀರ್ಣದ ಆಸ್ತಿಯಲ್ಲಿ ಇರುತ್ತಾರೆಂದು ನನಗೆ ನೆನಪಿಲ್ಲ. ಮಂಜುಳಾರವರು ಅವರ ಭಾಗದ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ನೆನಪಿಲ್ಲ. ಪ್ರತಿವಾದಿ ಹೆಸರಿಗೆ ಕ್ರಯಪತ್ರ ಬರೆದುಕೊಟ್ಟ ನಂತರ ಸದರಿ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಮಂಜುಳಾರವರು ಅವರಿಗೆ ಸೇರಿದ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿದ ನಂತರ ನಾನು ದಾವಾ ಆಸ್ತಿ ಬಳಿ ಹೋಗಿರುತ್ತೇನೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿರುವ ಸ.ನಂ ಮತ್ತು ವಿಸ್ತೀರ್ಣ ನನ್ನಿಂದ ಹೇಳಲಾಗುವುದಿಲ್ಲ. ದಾವಾ ಆಸ್ತಿಯಲ್ಲಿ ನನ್ನ ಮಾವ ಕೋರಿಗಾಗಿ ಮಾಡುವ ಬಗ್ಗೆ ದಾಖಲೆಗಳು ಇರುವುದಿಲ್ಲ. ದಾವಾ ಆಸ್ತಿಯಲ್ಲಿ ನನ್ನ ಮಾವ ಕೋರಿಗಾಗಿ ವ್ಯವಸಾಯ ಮಾಡಿರುವುದಿಲ್ಲ ಹಾಗೂ ನಾನು ದಾವಾ ಆಸ್ತಿಯ ಬಳಿ ಹೋಗಿರುವುದಿಲ್ಲ, ನನಗೆ ದಾವಾ ಆಸ್ತಿ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯಪ್ರಮಾ ಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**